**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-225/2023**

ಪಿ.ಡಬ್ಲ್ಯೂಃ- 7
ಸಿ.ಡಬ್ಲ್ಯೂಃ- 7

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕಾಂತರಾಜಪ್ಪ |
| ತಂದೆಯ ಹೆಸರುಃ | : | ಚಂದ್ರಪ್ಪ |
| ವಯಸ್ಸುಃ | : | 55 ವರ್ಷ |
| ವೃತ್ತಿಃ | : | ಹೊಳೇನರಸೀಪುರ ಬಿ ಇ ಒ ಕಚೇರಿಯಲ್ಲಿ ಇ ಸಿ ಒ |
| ವಾಸಃ | : | ಹೊಳೇನರಸೀಪುರ. |

**ದಿನಾಂಕಃ 19-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ 3 ವರ್ಷಗಳಿಂದ ಹೊಳೇನರಸೀಪುರ ಬಿ ಇ ಒ ಕಚೇರಿಯಲ್ಲಿ ಇ ಸಿ ಒ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ನ್ಯಾಯಾಲಯದ ಮುಂದಿರುವ ಆರೋಪಿ ಚಂದ್ರಮೌಳಿ ಉಃ ಮುರುಳಿಯನ್ನು ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಳೇನರಸೀಪುರದ ವೃತ್ತ ಕಚೇರಿಯಲ್ಲಿ ನೋಡಿರುತ್ತೇನೆ. ದಿಃ20.07.2023 ರಂದು ಹೊಳೇನರಸೀಪುರದ ಬಿ ಇ ಒ ರವರು ನನ್ನನ್ನು ಕುರಿತು ಹೊಳೇನರಸೀಪುರ ವೃತ್ತ ಕಚೇರಿಯಿಂದ ಓರ್ವ ಸಿಬ್ಬಂದಿಯನ್ನು ಮಹಜರಿಗೆ ಸಾಕ್ಷಿದಾರರನ್ನಾಗಿ ಕಳುಹಿಸಲು ಕೋರಿಕೆ ಬಂದಿದ್ದು ನೀವು ಹೊಳೇನರಸೀಪುರ

ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿ ಪ್ರಕರಣದ ತನಿಖೆಯಲ್ಲಿ ಮಹಜರ್ ಸಾಕ್ಷಿದಾರರಾಗಿ ಸಹಕರಿಸಿ ಎಂದು ಮೌಖಿಕವಾಗಿ ಸೂಚಿಸಿದರು. ಅದರಂತೆ ನಾನು ದಿ:20.07.2023 ರಂದು ಮಧ್ಯಾಹ್ನ ಸುಮಾರು 2.25 ಗಂಟೆ ಸಮಯಕ್ಕೆ ಹೊಳೇನರಸೀಪುರದ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿರುತ್ತೇನೆ. ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ವೃತ್ತ ನಿರೀಕ್ಷಕರು ಆರೋಪಿ ಚಂದ್ರಮೌಳಿ ಉ: ಮುರುಳಿಯನ್ನು ವಿಚಾರಣೆ ಮಾಡುತ್ತಿದ್ದರು. ಆರೋಪಿತನ ವಿಚಾರಣಾ ಕಾಲದಲ್ಲಿ ಆತ ಆತನ ಪತ್ನಿ ಅಂಬಿಕಾ ರವರನ್ನು ಕೊಲೆ ಮಾಡಿರುವ ಬಗ್ಗೆ ಒಪ್ಪಿಕೊಂಡು ಸದರಿ ಕೊಲೆಗೆ ಸಂಬಂಧಿಸಿದಂತೆ ಕೃತ್ಯ ನಡೆದ ಕಾಲದಲ್ಲಿ ತಾನು ಧರಿಸಿದ್ದ ಒಂದು ಶರ್ಟು, ಒಂದು ಪ್ಯಾಂಟ್ ಹಾಗೂ ಬನಿಯನ್ ಅನ್ನು ಬಿಚ್ಚಿ ಹಾಜರುಪಡಿಸಿರುತ್ತಾನೆ. ಅಲ್ಲದೆ ಆರೋಪಿ ಆತನ ಬಳಿ ಇದ್ದ ಅಂಬಿಕಾ ರವರ ಟ್ಯಾಗ್ ಇರುವ ಐಡಿ ಕಾರ್ಡು ಹಾಗೂ ಮಾಸ್ಕು ಹಾಜರುಪಡಿಸಿರುತ್ತಾನೆ. ಆರೋಪಿತ ಧರಿಸಿದ್ದ ಶರ್ಟು ಹಾಗೂ ಪ್ಯಾಂಟ್ ಗೆ ರಕ್ತದ ಕಲೆ ಆಗಿತ್ತು. ಬನಿಯನ್ ಮೇಲೆ ಯಾವುದೇ ರಕ್ತದ ಕಲೆ ಇರಲಿಲ್ಲ. ಪೊಲೀಸರು ಮೇಲೆ ಕಾಣಿಸಿದ ವಸ್ತುಗಳನ್ನು ಬಟ್ಟೆಯ ಚೀಲಗಳಲ್ಲಿ ಹಾಕಿ ಪ್ಯಾಕ್ ಮಾಡಿ M ಎಂಬ ಅಕ್ಷರದಿಂದ ಸೀಲು ಮಾಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಆರೋಪಿತ ಹಾಜರುಪಡಿಸಿ ಪೊಲೀಸರು ಅಮಾನತ್ತುಪಡಿಸಿಕೊಂಡ ಆರೋಪಿತ ಧರಿಸಿದ್ದ ಬಟ್ಟೆಗಳು ಹಾಗೂ ಹಾಜರುಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ.

3. ಸೀಲು ಮಾಡಲಾಗಿರುವ ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸೀಲು

ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ಮಾಸಲು ಗುಲಾಬಿ ಬಣ್ಣದ ಸಿಮೆಂಟ್ ಬಣ್ಣದ ಗೆರೆ ಇರುವ ತುಂಬುತೋಳಿನ ಶರ್ಟನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಸದರಿ ಶರ್ಟಿನ ಎಡ ತೋಳಿನ ಬಲಭುಜದ ಮುಂಭಾಗ, ಮಧ್ಯಭಾಗ ಜೇಬಿನ ಕೆಳಭಾಗ ರಕ್ತದ ಕಲೆಗಳು ಇರುವುದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಮೇಲೆ ಕಾಣಿಸಿದ ತುಂಬುತೋಳಿನ ಶರ್ಟನ್ನು ಮುಮಾ–1 ಎಂದು ಗುರುತಿಸಲಾಯಿತು. ಸೀಲು ಮಾಡಲಾಗಿರುವ ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ಪಾಚಿ ಹಸಿರುಬಣ್ಣದ ಸ್ಯಾಂಡೋ ಬನಿಯನ್ ಅನ್ನು ಸಾಕ್ಷಿದಾರರು ಗುರುತಿಸಿದ್ದು ಸದರಿ ಬನಿಯನ್ ಅನ್ನು ಮುಮಾ–2 ಎಂದು ಗುರುತಿಸಲಾಯಿತು. ಸೀಲು ಮಾಡಲಾಗಿರುವ ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ನಶೆ ಕಲರ್ ನ ಪ್ಯಾಂಟನ್ನು ಸಾಕ್ಷಿದಾರರು ಗುರುತಿಸಿದ್ದು ಸದರಿ ಪ್ಯಾಂಟ್ ನ ಬಲತೋಳಿನ ಮಂಡಿಯ ಕೆಳಭಾಗ ಪೂರ್ಣವಾಗಿ ರಕ್ತದ ಕಲೆ ಇರುವ ಬಗ್ಗೆ ಹಾಗೂ ಪ್ಯಾಂಟ್ ನ ಎಡ ತೋಳಿನಲ್ಲಿ ಸಹ ರಕ್ತದ ಕಲೆಗಳು ಇರುವ ಬಗ್ಗೆ ಸಾಕ್ಷಿದಾರರು ಗುರುತಿಸಿದ್ದು ಸದರಿ ಪ್ಯಾಂಟನ್ನು ಮುಮಾ–3 ಎಂದು ಗುರುತಿಸಲಾಯಿತು. ಒಂದು ಪ್ಲಾಸ್ಟಿಕ್ ಚೀಲದಲ್ಲಿರುವ ಮೃತ ಅಂಬಿಕಾ ರವರ ಟ್ಯಾಗ್ ಇರುವ ಐಡಿ ಕಾರ್ಡನ್ನು

ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–4 ಎಂದು ಗುರುತಿಸಲಾಯಿತು. ಒಂದು ಪ್ಲಾಸ್ಟಿಕ್ ಚೀಲದಲ್ಲಿರುವ ಒಂದು ಜಾಕಿ ಹೆಸರಿರುವ ಒಂದು ಬಟ್ಟೆಯ ಮಾಸ್ಕನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–5 ಎಂದು ಗುರುತಿಸಲಾಯಿತು. ಪೊಲೀಸರು ಆರೋಪಿತ ಹಾಜರುಪಡಿಸಿದ ಮುಮಾ–1 ರಿಂದ 5 ವಸ್ತುಗಳ್ಳು ಅಮಾನತ್ತು ಮಹಜರ್ ತಯಾರಿಸಿ ಅಮಾನತ್ತುಪಡಿಸಿಕೊಂಡರು. ಸದರಿ ಮಹಜರಿಗೆ ಪಂಚರಾಗಿ ಹಾಜರಿದ್ದ ನಾನು ಹಾಗೂ ಪ್ರತಾಪ್ ಕುಮಾರ್ ರವರು ನಮ್ಮ ಸಹಿಗಳನ್ನು ಮಾಡಿರುತ್ತೇವೆ. ಮಹಜರನ್ನು ಮಧ್ಯಾಹ್ನ 2.30 ರಿಂದ 3.00 ಗಂಟೆಯವರೆವಿಗೆ ಬರೆಯಲಾಯಿತು. ಸದರಿ ಮಹಜರಿಗೆ ಆರೋಪಿತನ ಸಹಿಯನ್ನು ಸಹ ಪ್ರಕರಣದ ತನಿಖಾಧಿಕಾರಿಯವರು ಪಡೆದರು. ಸಾಕ್ಷಿದಾರರು ಗುರುತಿಸಿದ ಅಮಾನತ್ತು ಮಹಜರನ್ನು ನಿಪಿ–13 ಎಂದು ಗುರುತಿಸಲಾಯಿತು . ನಿಪಿ–13 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–13(ಎ) ಎಂದು ಗುರುತಿಸಲಾಯಿತು.

4. ನಿಪಿ–13 ಮಹಜರ್ ಕಾಲದಲ್ಲಿ ಸಿಪಿಐ ರವರ ಕಚೇರಿಯಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ನಿಪಿ–13 ಮಹಜರ್ ಕಾಲದಲ್ಲಿ ತೆಗೆಯಲಾದ ಫೋಟೋಗಳು ಎಂದು ಸಾಕ್ಷಿದಾರರು ಗುರುತಿಸಿದ 6 ಫೋಟೋಗಳನ್ನು ಕ್ರಮವಾಗಿ ನಿಪಿ–14 ರಿಂದ ನಿಪಿ–19 ಎಂದು ಗುರುತಿಸಲಾಯಿತು. ನಿಪಿ–14 ರಿಂದ 19 ರಲ್ಲಿ ಸಾಕ್ಷಿದಾರರು ಪ್ರಕರಣದ ತನಿಖಾಧಿಕಾರಿಯ ಇರುವಿಕೆಯನ್ನು, ಆರೋಪಿತನ ಇರುವಿಕೆಯನ್ನು ಹಾಗೂ ಪಂಚರಾದ ತಮ್ಮ ಹಾಗೂ ಪ್ರತಾಪ್ ಕುಮಾರ್ ರವರ ಇರುವಿಕೆಯನ್ನು ಸಹ ಗುರುತಿಸಿರುತ್ತಾರೆ.

5. ನಂತರ ಆರೋಪಿತ ಸಿಪಿಐ ರವರನ್ನು ಹಾಗೂ ಪಂಚರಾದ ನನ್ನನ್ನು ಹಾಗೂ ಪ್ರತಾಪ್ ಕುಮಾರ್ ರವರನ್ನು ಪೊಲೀಸರ ಜೀಪಿನಲ್ಲಿ ಎಸ್ ಅಂಕನಹಳ್ಳಿ ಫಾರೆಸ್ಟ್ ಒಳಗಡೆ ಕರೆದುಕೊಂಡು ಹೋಗಿ ತಾನು ಕೊಲೆ ಮಾಡಿದ್ದ ತನ್ನ ಪತ್ನಿ ಅಂಬಿಕಾ ರವರ ಮೃತದೇಹವನ್ನು ತೋರಿಸಿ ಗುರುತಿಸಿರುತ್ತಾನೆ. ಸ್ಥಳದಲ್ಲಿ ಅಂಬಿಕಾ ರವರ ಮೃತದೇಹ ಅಂಗಾತವಾಗಿ ಬಿದ್ದಿತ್ತು, ಮೃತದೇಹದಿಂದ ಸ್ವಲ್ಪ ದೂರದಲ್ಲಿ ಒಂದು ದಪ್ಪ ಕಲ್ಲು ಬಿದ್ದಿದ್ದು ಅದನ್ನು ಆರೋಪಿತ ತೋರಿಸಿ ಇದೇ ಕಲ್ಲಿನಿಂದ  ತಾನು ತನ್ನ ಪತ್ನಿಯನ್ನು ಕೊಲೆ ಮಾಡಿರುವುದಾಗಿ ಗುರುತಿಸಿರುತ್ತಾನೆ. ಸ್ಥಳದಲ್ಲಿ ಮೃತ ಅಂಬಿಕಾ ರವರ ಒಂದು ಜೊತೆ ಚಪ್ಪಲಿ ಬಿದ್ದಿತ್ತು. ಪೊಲೀಸರು ಸ್ಥಳದಿಂದ ಮೃತ ಅಂಬಿಕಾ ರವರ ಒಂದು ಜೊತೆ ಚಪ್ಪಲಿ ಹಾಗೂ ಎರಡು ಕಲ್ಲಿನ ಚೂರುಗಳು, ಒಂದು ದಪ್ಪ ಸೈಜು ಗಲ್ಲು, ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ಸಂಗ್ರಹಿಸಿ ಅವುಗಳನ್ನು ಬಟ್ಟೆಯ ಚೀಲಗಳಲ್ಲಿ ಹಾಕಿ M ಎಂಬ ಅಕ್ಷರದಿಂದ ಸೀಲು ಮಾಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ಅಮಾನತ್ತುಪಡಿಸಿಕೊಂಡರು. ಪೊಲೀಸರು ಸ್ಥಳದಿಂದ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ.

6. ಒಂದು ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿ ಇರುವುದನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ ವಾಕ್ ಮೇಟ್ ಕಂಪನಿಯ ಸೀಮೆಂಟ್ ಬಣ್ಣದ ಒಂದು ಜೊತೆ ಲೇಡಿಸ್ ಚಪ್ಪಲಿಯನ್ನು ಸಾಕ್ಷಿದಾರರು ಗುರುತಿಸಿದ್ದು ಒಂದು ಜೊತೆ ಚಪ್ಪಲಿಗಳನ್ನು ಒಟ್ಟಾಗಿ ಮುಮಾ-6 ಎಂದು

ಗುರುತಿಸಲಾಯಿತು. ಮುಮಾ–6 ಚಪ್ಪಲಿಯ ಬಲಗಾಲಿನ ಚಪ್ಪಲಿ ಸಂಪೂರ್ಣ ರಕ್ತಮಯ ಆಗಿರುವುದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಮತ್ತೊಂದು ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿ ಇರುವುದನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ 2 ಕಲ್ಲಿನ ಚೂರುಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುಮಾ–7 ಎಂದು ಗುರುತಿಸಲಾಯಿತು. ಮುಮಾ–7 ಕಲ್ಲಿನ ಚೂರುಗಳ ಮೇಲೆ ಸಹ ರಕ್ತದ ಕಲೆ ಇರುವುದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಮತ್ತೊಂದು ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿ ಇರುವುದನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ ಒಂದು ದಪ್ಪ ಸೈಜುಗಲ್ಲನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–8 ಎಂದು ಗುರುತಿಸಲಾಯಿತು. ಮುಮಾ–8 ಕಲ್ಲಿನ ಮೇಲೆ ಸಹ ರಕ್ತದ ಕಲೆ ಇರುವುದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಮತ್ತೊಂದು ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿ ಇರುವುದನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ ರಕ್ತಮಿಶ್ರಿತ ಮಣ್ಣನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–9 ಎಂದು ಗುರುತಿಸಲಾಯಿತು. ಮತ್ತೊಂದು ಬಟ್ಟೆಯ ಚೀಲದ ಮೇಲೆ ಅಂಟಿಸಲಾಗಿರುವ ಗುರುತಿನ ಚೀಟಿಯಲ್ಲಿ ಸಾಕ್ಷಿದಾರರು ತಮ್ಮ ಸಹಿ ಇರುವುದನ್ನು ಗುರುತಿಸಿರುತ್ತಾರೆ. ಸೀಲು ಮಾಡಲಾಗಿರುವ

ಬಟ್ಟೆಯ ಚೀಲವನ್ನು ತೆರೆಯಲಾಯಿತು. ಅದರಲ್ಲಿರುವ ಸಾದಾ ಮಣ್ಣನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ-10 ಎಂದು ಗುರುತಿಸಲಾಯಿತು. ಮುಮಾ-6 ರಿಂದ 10ನ್ನು ಪೊಲೀಸರು ಮಹಜರ್ ತಯಾರಿಸಿ ಅಮಾನತ್ತುಪಡಿಸಿಕೊಂಡರು. ಸದರಿ ಮಹಜರಿಗೆ ಪಂಚರಾಗಿ ನಾನು ಹಾಗೂ ಪ್ರತಾಪ್ ಕುಮಾರ್ ನಮ್ಮ ಸಹಿಗಳನ್ನು ಮಾಡಿರುತ್ತೇವೆ. ಸದರಿ ಮಹಜರಿಗೆ ಆರೋಪಿತನ ಸಹಿಯನ್ನು ಸಹ ಪ್ರಕರಣದ ತನಿಖಾಧಿಕಾರಿಯವರು ಪಡೆದಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಅಮಾನತ್ತು ಮಹಜರನ್ನು ನಿಪಿ-20 ಎಂದು ಗುರುತಿಸಲಾಯಿತು. ನಿಪಿ-20 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ನಿಪಿ-20 ಮಹಜರನ್ನು ಪೊಲೀಸರು ಮಧ್ಯಾಹ್ನ 3.15 ರಿಂದ 4.15 ಗಂಟೆಯವರೆಗೆ ಬರೆದಿರುತ್ತಾರೆ. ನಿಪಿ-20 ಮಹಜರ್ ಕಾಲದಲ್ಲಿ ಪೊಲೀಸರು ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಈಗ ನೋಡುತ್ತಿರುವ ಫೋಟೋಗಳಲ್ಲಿ ನಿಪಿ-20 ಮಹಜರ್ ಬರೆಯುವ ಪೂರ್ವದಲ್ಲಿ ಆರೋಪಿತ ಅಂಕನಹಳ್ಳಿ ಫಾರೆಸ್ಟಿನಲ್ಲಿ ಜೀಪಿನಿಂದ ಇಳಿದು ಪ್ರಕರಣದ ತನಿಖಾಧಿಕಾರಿಯಾದ ಸಿಪಿಐ ಹಾಗೂ ನಮ್ಮನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿರುವುದು ಕಂಡು ಬರುತ್ತಿದೆ. ಸಾಕ್ಷಿದಾರರು ಗುರುತಿಸಿದ ಒಟ್ಟು 3 ಫೋಟೋಗಳನ್ನು ನಿಪಿ-21 ರಿಂದ ನಿಪಿ-23 ಎಂದು ಗುರುತಿಸಲಾಯಿತು. ನಿಪಿ-21 ರಿಂದ ನಿಪಿ-23 ರಲ್ಲಿ ಸಾಕ್ಷಿದಾರರು ಆರೋಪಿತನ ಇರುವಿಕೆಯನ್ನು ಹಾಗೂ ಪ್ರಕರಣದ ತನಿಖಾಧಿಕಾರಿಯ ಇರುವಿಕೆಯನ್ನು ಗುರುತಿಸಿರುತ್ತಾನೆ. ಈಗ ನೋಡುತ್ತಿರುವ ಫೋಟೋ ಆರೋಪಿತ ತಾನು ತನ್ನ ಪತ್ನಿ ಅಂಬಿಕಾ ರವರನ್ನು ಕೊಲೆ ಮಾಡಲು ಬಳಸಿದ ಕಲ್ಲನ್ನು ಗುರುತಿಸುತ್ತಿರುವ ಬಗ್ಗೆ ಪೊಲೀಸರು

ತೆಗೆದ ಫೋಟೋ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ–24 ಎಂದು ಗುರುತಿಸಲಾಯಿತು. ನಿಪಿ–24ರಲ್ಲಿ ಸಾಕ್ಷಿದಾರರು ಆರೋಪಿತನ ಇರುವಿಕೆಯನ್ನು, ತನ್ನ ಇರುವಿಕೆಯನ್ನು, ಪ್ರಕರಣದ ತನಿಖಾಧಿಕಾರಿಯ ಇರುವಿಕೆಯನ್ನು ಗುರುತಿಸಿರುತ್ತಾರೆ. ನಂತರ ಪ್ರಕರಣದ ತನಿಖಾಧಿಕಾರಿಯವರು ಪಂಚರಾದ ನಾವು ಹಾಗೂ ಆರೋಪಿ ಠಾಣೆಗೆ ಹಿಂದಿರುಗಿರುತ್ತೇವೆ.

**ಪಾಟೀ ಸವಾಲುಃ ಆರೋಪಿಗಳ ಪರ ಡಿಫೆನ್ಸ್ ಕೌನ್ಸಿಲ್ ರವರಿಂದ**

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.